# ವಾರ್ಡ್ ಸಭೆ ಸಂಖ್ಯೆ.34

ದಿನಾಂಕ:.20.05.2022 ರಂದು ಸಮಯ 11:00 ಗಂಟೆಗೆ ವಾರ್ಡ್.ಸಂಖ್ಯೆ.44 ಮಾರಪ್ಪನಪಾಳ್ಯ ವಾರ್ಡ್ ಕಛೇರಿಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಮಾನ್ಯ ನೋಡಲ್ ಅಧಿಕಾರಿ (ಅಧ್ಯಕ್ಷರು) ರವರ ಅಧ್ಯಕ್ಷತೆಯಲ್ಲಿ ಕರೆಯಲಾಗಿತ್ತು.

ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳು

1. ಶ್ರೀ ಎಲ್ ವೆಂಕಟೇಶ್ ನೋಡಲ್ ಅಧಿಕಾರಿ ರವರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ. (ಅಧ್ಯಕ್ಷರು)
2. ಶ್ರೀ ಜಯಪಾಲ್ ಗೌತಮನಗರ ಸದಸ್ಯರು.
3. ಶ್ರೀ ವೈ.ಆರ್ ವೆಂಕಟೇಶ್ ಸದಸ್ಯರು.
4. ಶ್ರೀಮತಿ ಮಹಾಲಕ್ಷ್ಮೀ ಸದಸ್ಯರು.
5. ಶ್ರೀ ನಂಜೇಗೌಡ ಬಿ.ವಿ ಸದಸ್ಯರು.
6. ಶ್ರೀ ಬಿ.ಆರ್ ಪುಟ್ಟಸ್ವಾಮಿ ಸದಸ್ಯರು.
7. ಶ್ರೀ ನಾಗೇಂದ್ರ ಸದಸ್ಯರು.
8. ಶ್ರೀ ಗೋಪಿ ಸದಸ್ಯರು.
9. ಶ್ರೀ ಪ್ರದೀಪ್‌ಕುಮಾರ್ ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
10. ಶ್ರೀ ಛಾಯಪತಿ ಎಂ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
11. ಶ್ರೀ ಜಿ.ಕೆ ವೆಂಕಟೇಶಯ್ಯ, ಕೆಲಸ ಪರಿವೀಕ್ಷಕರು, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
12. ಶ್ರೀ ಸೋಮನಾಥ್, ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ), ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
13. ಶ್ರೀ ದಿನೇಶ್ ಕುಮಾರ್ ಸಹಾಯಕ ಅಭಿಯಂತರರು (ಬೆಸ್ಕಾಂ) ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
14. ಶ್ರೀ ಓಂ ಪ್ರಕಾಶ್ ತೋಟಗಾರಿಕ ಇಲಾಖೆ, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
15. ಶ್ರೀ ಮುತ್ತಪ್ಪ, ಶಂಕರನಗರ ಪ್ರಾಥಮಿಕ ಆರೋಗ್ಯ ಕೇಂದ್ರ.
16. ಶ್ರೀ ರಂಜಿತ್ ಮಾರ್ಷಲ್ ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.

ಶ್ರೀ ಎಲ್ ವೆಂಕಟೇಶ್ ನೋಡಲ್ ಅಧಿಕಾರಿ ರವರು ಸಭೆಯಲ್ಲಿ ಹಾಜರಿದ್ದ ಸದಸ್ಯರನ್ನು, ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಲಾಯಿತು.

| ಕ್ರ. ಸಂ | ವಿವರಣೆ | ಕ್ರಮ |
|---|---|---|
| 1. | ಅಧ್ಯಕ್ಷರು ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ, ಅಧಿಕಾರಿಗಳಿಗೆ ಓದಿ ತಿಳಿಸಿದರು. | – |
| 2. | ಕಾರ್ಯದರ್ಶಿಗಳು ಸಾರ್ವಜನಿಕರ ಸಮಸ್ಯೆಗಳಿಗೆ ಮೊದಲ ಆದ್ಯತೆ ನೀಡಿ ಸಮಸ್ಯೆಯನ್ನು ತಿಳಿಸುವಂತೆ ಸಾರ್ವಜನಿಕರನ್ನು ಕೋರಿದರು. | – |
| 3. | ದಿನಾಂಕ:20.05.2020 ರಂದು ಶುಕ್ರವಾರ ದಂದು ಸ್ಥಳೀಯ ಶಾಸಕರು ಆದ ಮಾನ್ಯ ಶ್ರೀ ಕೆ. ಗೋಪಾಲಯ್ಯ ರವರು ವಿಜಯಾನಂದನಗರ 4ನೇ ಮುಖ್ಯರಸ್ತೆಯಲ್ಲಿ ಸ್ಯಾನಿಟರಿ ಲೈನ್ ಹಾಳಾಗಿ ಮಳೆ ನೀರು ಎಲ್ಲಾ ಮನೆಗಳಲ್ಲಿ ಒಳಗೆ ಹೋಗಿರುವುದು ನೋಡೊ ಸ್ಯಾನಿಟರಿ ಲೈನ್ ಸರಿಪಡಿಸಲು ಸೂಚಿಸಿದರು. ಇದಕ್ಕೆ ಶ್ರೀ ಸೋಮನಾಥ್ ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ರವರು ವಿಜಯಾನಂದನಗರದ ವ್ಯಾಪ್ತಿಯ ಸ್ಯಾನಿಟರಿ ಲೈನ್ ಬದಲಾಯಿಸಲು ಅಂದಾಜುಪಟ್ಟಿಯನ್ನು ಸಲ್ಲಿಸಲಾಗಿರುತ್ತದೆ. ಈಗ ತಾತ್ಕಾಲಿಕವಾಗಿ ಸಮಸ್ಯೆಯನ್ನು ಪರಿಹರಿಸಲು ಕ್ರಮ ಕೈಗೊಳ್ಳುತ್ತೇನೆ ಎಂದು ತಿಳಿಸಿದರು. | ಬಿ.ಡಬ್ಲ್ಯೂ.ಎಸ್. ಎಸ್.ಬಿ ಇಲಾಖೆ |
| 4. | ಸಭೆಯಲ್ಲಿ ಹಾಜರಿದ್ದ ಸದಸ್ಯರು ಹಾಗೂ ನಿಕಟಪೂರ್ವ ಪಾಲಿಕೆ ಸದಸ್ಯರು ರವರು ರವಿತೇಜ ಪೆಟ್ರೋಲ್ ಬಂಕ್ ಹತ್ತಿರ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ ರವರು 8 ತಿಂಗಳ ಹಿಂದೆ ರಸ್ತೆ ಅಗೆದು ಸರಿಯಾಗಿ ದುರಸ್ಥಿ ಮಾಡಿರುವುದಿಲ್ಲ ಇದರಿಂದ ಸರ್ವಾಜನಿಕರ ವಾಹನಗಳ ಸಂಚಾರಕ್ಕೆ ತುಂಬ ತೊಂದರೆಯಾಗಿರುತ್ತದೆ ಆದ್ದರಿಂದ ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ರವರಿಗೆ ಮುಂದಿನ ಸಭೆಯೊಳಗೆ ರಸ್ತೆ ಸರಿಯಾಗಿ ದುರಸ್ಥಿ ಮಾಡಿಸುವಂತೆ ಪತ್ರ ಬರೆಯಲು ಕೋರಿದರು. | ಬಿ.ಡಬ್ಲ್ಯೂ.ಎಸ್. ಎಸ್.ಬಿ ಇಲಾಖೆ |
| 5. | ಶ್ರೀ ನಾಗೇಂದ್ರ ಸದಸ್ಯರು ರವರು ವಾರ್ಡ್ ವ್ಯಾಪ್ತಿಯ ಕೊಳವೆ ಬಾವಿಗಳ ಸ್ಥಿತಿಗತಿಗಳನ್ನು ಮುಂದಿನ ಸಭೆಯಲ್ಲಿ ನೀಡುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಎಲೆಕ್ಟ್ರಿಕಲ್ಸ್ ಉಪವಿಭಾಗ (ಪಶ್ಚಿಮ), ರವರಿಗೆ ಪತ್ರ ಬರೆಯಲು ಕೋರಿದರು. | ಸ.ಕಾ.ನಿ.ಅ ಕೊಳವೆ ಬಾವಿ |
| 6. | ಶ್ರೀ ನಾಗೇಂದ್ರ ಸದಸ್ಯರು ರವರು ಕಣ್ವ ಆಸ್ಪತ್ರೆ ರಸ್ತೆಯ ಬೀದಿ ದೀಪಗಳು ಉರಿಯುತ್ತಿರುವುದಿಲ್ಲ ಸರಿಪಡಿಸಿ ಎಂದು ಕೋರಿದರು. ಇದಕ್ಕೆ ಬೀದಿ ದೀಪ ಗುತ್ತಿಗೆ ದಾರರು ಇನ್ನೂ ಐದ ದಿನಗಳಲ್ಲಿ ಸರಿಪಡಿಸಲಾಗುವುದು ಎಂದು ತಿಳಿಸಿದರು. | ಬೀದಿ ದೀಪ ಇಲಾಖೆ |

Scanned with CamScanner

| | | |
|---|---|---|
| 7. | ಶ್ರೀ ನಾಗೇಂದ್ರ ಸದಸ್ಯರು ರವರು ವಾರ್ಡ್ ವ್ಯಾಪ್ತಿಯಲ್ಲಿ ಎಷ್ಟು ಬ್ಲಾಕ್ ಸ್ಪಾಟ್‌ಗಳನ್ನು ತೆರವುಗಿಳಿಸಿರುತ್ತೀರಿ ಎಂಬುದರ ಬಗ್ಗೆ ಮಾಹಿತಿ ಕೋರಿದರು. ಇದಕ್ಕೆ ಶ್ರೀ ಛಾಯಾಪತಿ ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಮುಂದಿನ ಸಭೆಯಲ್ಲಿ ನೀಡುತ್ತೇನೆ ಎಂದು ತಿಳಿಸಿದರು. | ಕಿರಿಯ ಆರೋಗ್ಯ ಪರಿವೀಕ್ಷಕರು |
| 8. | ಶ್ರೀ ನಾಗೇಂದ್ರ ಸದಸ್ಯರು ರವರು ವಾರ್ಡ್ ವ್ಯಾಪ್ತಿಯಲ್ಲಿ ಎಳನೀರು ಮಾರುವವರಿಗೆ ತೆಂಗಿನ ಚಿಪ್ಪುಗಳನ್ನು ತೆರವುಗೊಳಿಸಲು ಸೂಚಿಸಿ ನೋಟೀಸ್ ಜಾರಿ ಮಾಡಲು ಕೋರಲಾಗಿತ್ತು ನೋಟೀಸ್ ನೀಡಿರುವ ಪ್ರತಿಯನ್ನು ನೀಡಿ ಎಂದು ಕೋರಿದರು. ಇದಕ್ಕೆ ಹಿರಿಯ ಆರೋಗ್ಯ ಪರಿವೀಕ್ಷಕರು ನೋಟೀಸ್ ಜಾರಿ ಮಾಡಿ ಮುಂದಿನ ಸಭೆಯಲ್ಲಿ ನೀಡಲಾಗುವುದು ಎಂದು ತಿಳಿಸಿದರು. | ಹಿರಿಯ ಆರೋಗ್ಯ ಪರಿವೀಕ್ಷಕರು |
| 9. | ಶ್ರೀ ನಾಗೇಂದ್ರ ಸದಸ್ಯರು ರವರು ವಾರ್ಡ್ ವ್ಯಾಪ್ತಿಯಲ್ಲಿ 16 ಐ ಮಾಸ್ಟ್‌ಗಳ ರಿಪೇರಿ ಬಗ್ಗೆ ಮಾಹಿತಿ ಕೋರಿದರು. ಇದಕ್ಕೆ ಮಾನ್ಯ ನೋಡಲ್ ಅಧಿಕಾರಿ ರವರು ಮುಖ್ಯ ಅಭಿಯಂತರರು ಬೀದಿ ದೀಪ ಇಲಾಖೆ ಮತ್ತು ಜಂಟಿ ಆಯುಕ್ತರು ಬೀದಿ ದೀಪ ಇಲಾಖೆ ರವರಿಗೆ ಪತ್ರ ಬರೆಯಲಾಗುವುದು ಎಂದು ತಿಳಿಸಿದರು. | ಬೀದಿ ದೀಪ ಇಲಾಖೆ |
| 10. | ಶ್ರೀ ನಾಗೇಂದ್ರ ಸದಸ್ಯರು ರವರು ವಾರ್ಡ್ ವ್ಯಾಪ್ತಿಯಲ್ಲಿ ಬೋರ್‌ವೆಲ್ ಪ್ಯಾನಲ್ ಬೋರ್ಡ್‌ಗಳನ್ನು ರಿಪೇರಿ ಮಾಡಿರುವುದಿಲ್ಲ ಎಂದು ತಿಳಿಸಿದರು. ಇದಕ್ಕೆ ಮಾನ್ಯ ನೋಡಲ್ ಅಧಿಕಾರಿ ರವರು ಸಂಬಂದಪಟ್ಟವರಿಗೆ ಪತ್ರ ಬರೆಯಲಾಗುವುದು ಎಂದು ತಿಳಿಸಿದರು. | ಸ.ಕಾ.ನಿ.ಅ ಕೊಳವೆ ಬಾವಿ |
| 11. | ಸಭೆಯಲ್ಲಿ ಹಾಜರಿದ್ದ ಸದಸ್ಯರು ಹಾಗೂ ನಿಕಟಪೂರ್ವ ಪಾಲಿಕೆ ಸದಸ್ಯರು ರವರು ಶಂಕರನಗರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪ್ರತೀ ವಾರಕ್ಕೊಮ್ಮೆ ಒಂದು ಬಾರಿ ಸ್ಥಳೀಯ ಮುಖಂಡರನ್ನು ಕರೆದು ಸಭೆಯನ್ನು ಏರ್ಪಡಿಸಲು ಕೋರಿದರು ಹಾಗೂ ಆರೋಗ್ಯ ವೈದ್ಯಾಧಿಕಾರಿಗಳಿಗೆ ಆಸ್ಪತ್ರೆಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿಯೊಂದಿಗೆ ಜವಬ್ದಾರಿಯುತ ಅಧಿಕಾರಿಗಳು ಸಭೆಗೆ ಹಾಜರಾಗುವಂತೆ ಕೋರಿ ಪತ್ರ ಬರೆಯಲು ಕೋರಿದರು. | ಪ್ರಾಥಮಿಕ ಆರೋಗ್ಯ ಕೇಂದ್ರ |
| 12. | ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಸಾರ್ವಜನಿಕರು ಶಂಕರನಗರ ಮುಖ್ಯರಸ್ತೆಯನ್ನು ಸಾರ್ವಜನಿಕರು ತರಕಾರಿ ಮಾರುಕಟ್ಟೆ ಮಾಡಿಕೊಂಡಿರುತ್ತಾರೆ, ಸದರಿ ರಸ್ತೆಯಲ್ಲಿ ಒತ್ತುವರಿ ಮಾಡಿರುವ ಪಾದಾಚಾರಿ ಮಾರ್ಗವನ್ನು ತೆರವುಗೊಳಿಸಲು ಕೋರಿದರು. ಮಾನ್ಯ ನೋಡಲ್ ಅಧಿಕಾರಿ ರವರು, ಸಭೆಯಲ್ಲಿ ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳಿಗೆ ಮೇಲಾಧಿಕಾ | ಆರೋಗ್ಯ ಇಲಾಖೆ, ಕಾಮಗಾರಿ ಇಲಾಖೆ, ಪೋಲಿಸ್ ಇಲಾಖೆ |
| 13. | ಶ್ರೀ ನಾಗೇಂದ್ರ ಸದಸ್ಯರು ರವರು ಬಿ.ಎಲ್.ಅ-1 ಗಳ ಮಾಹಿತಿಗಳನ್ನು ನೀಡುವಂತೆ ಕೋರಿದರು. ಇದಕ್ಕೆ ಮಾನ್ಯ ನೋಡಲ್ ಅಧಿಕಾರಿ ರವರು ಸಂಬಂಧಪಟ್ಟವರಿಗೆ ಸೂಚಿಸಲು ತಿಳಿಸಿದರು. | ಕಂದಾಯ ಪರಿವೀಕ್ಷಕರು |
| 14. | ಶ್ರೀ ನಾಗೇಂದ್ರ ಸದಸ್ಯರು ರವರು ಪ್ರಾಥಮಿಕ ಆರೋಗ್ಯ ಕೇಂದ್ರ ಶಂಕರನಗರ ರವರು ವಾರ್ಡ್ ವ್ಯಾಪ್ತಿಯ ಖಾಸಗಿ ಆಸ್ಪತ್ರೆಗಳ ಸಮನ್ವಯದೊಂದಿಗೆ ಕಾರ್ಯ ನಿರ್ವಹಸಲಾಗುತ್ತಿದೆಯೇ ಎಂದು ಕೋರಿದರು. ಆದರೆ ಆರೋಗ್ಯ ವೈದ್ಯಾಧಿಕಾರಿಗಳು ಹಾಜರಿರಲಿಲ್ಲ. | ಆರೋಗ್ಯ ವೈದ್ಯಾಧಿಕಾರಿಗಳು |
| 15. | ಶ್ರೀ ನಾಗೇಂದ್ರ ಸದಸ್ಯರು ರವರು ವಿಜಯಾನಂದನಗರ 4 ನೇ ಅಡ್ಡರಸ್ತೆಯಲ್ಲಿ ರಸ್ತೆ ಗುಂಡಿ ಬಿದ್ದಿರುತ್ತದೆ ದುರಸ್ಥಿ ಪಡಿಸಲು ಕೋರಿದರು. ಇದಕ್ಕೆ ಮಾನ್ಯ ನೋಡಲ್ ಅಧಿಕಾರಿ ರವರು ಸಂಬಂದಪಟ್ಟವರಿಗೆ ಸೂಚಿಸಿಲಾಗುವುದು ಎಂದು ತಿಳಿಸಿದರು. | ಕಾಮಗಾರಿ ಇಲಾಖೆ |
| 16. | ಸಭೆಯಲ್ಲಿ ಹಾಜರಿದ್ದ ಸದಸ್ಯರು ಹಾಗೂ ನಿಕಟಪೂರ್ವ ಪಾಲಿಕೆ ಸದಸ್ಯರು ರವರು ಟಯೋಟ ಶೋರೂಂ ರವರಿಗೆ ಸರ್ವೀಸ್‌ಗೆ ಬಿಟ್ಟ ವಾಹನಗಳನ್ನು ರಸ್ತೆಯಲ್ಲಿ ನಿಲ್ಲಿಸದಂತೆ ನೋಟೀಸ್ ಜಾರಿ ಮಾಡಲು ಕೋರಿದರು. ಇದಕ್ಕೆ ಮಾನ್ಯ ನೋಡಲ್ ಅಧಿಕಾರಿ ರವರು ಸಂಬಂಧಪಟ್ಟವರಿಗೆ ಸೂಚಿಸಲಾಗುವುದು ಎಂದು ತಿಳಿಸಿದರು. | ಕಾಮಗಾರಿ ಇಲಾಖೆ |
| 17. | ಸಭೆಯಲ್ಲಿ ಮಳೆಯಿಂದಾಗುವ ತಗ್ಗು ಪ್ರದೇಶಗಳಲ್ಲಿ ಉಂಟಾಗುವ ಅನಾಹುತವನ್ನು ತಪ್ಪಿಸಲು ಮುಂಜಾಗ್ರತ ಕ್ರಮವಾಗಿ ಹಣಕಾಸಿನ ನೆರವು ನಿರೀಕ್ಷಿಸಿ ಮೋರಿಗಳಲ್ಲಿ ತುಂಬಿರುವ ಹೂಳನ್ನು ತೆರವುಗೊಳಿಸಲು ಸಭೆಯ ಸರ್ವ ಸದಸ್ಯರು ಒಕ್ಕೊರಲಾಗಿ ಮನವಿ ಮಾಡಿಕೊಂಡಿರುತ್ತಾರೆ. ನೋಡಲ್ ಅಧಿಕಾರಿಗಳು ತುರ್ತಾಗಿ ಕ್ರಮ ಕೈಗೊಳ್ಳಲಾಗುವುದು ಎಂದು ಸಭೆಗೆ ತಿಳಿಸಿರುತ್ತಾರೆ | - |
| 18. | ಈ ಸಭೆಯಲ್ಲಿ ಚರ್ಚಿಸಿದ ಸಮಸ್ಯೆಗಳನ್ನು ಪರಿಹರಿಸಿ ಸಂಬಂಧಿಸಿದ ಮಾಹಿತಿಗಳನ್ನು ತಪ್ಪದೆ ಮುಂದಿನ ಸಭೆಗೆ ತರುವುದು ಹಾಗೂ ಎಲ್ಲಾ ಅಧಿಕಾರಿಗಳು ಮತ್ತು ಸದಸ್ಯರು ಸಕಾಲದಲ್ಲಿ ಆಗಮಿಸುವಂತೆ ಕೋರಿದರು. | - |
| 19. | ಶ್ರೀ ಪುಟ್ಟಸ್ವಾಮಿ ಸದಸ್ಯರು ರವರು ಅಂತಿಮವಾಗಿ ಸಭೆಗೆ ಹಾಜರಿದ್ದ ಸದಸ್ಯರು, ಅಧಿಕಾರಿಗಳು ಮತ್ತು ಸಾರ್ವಜನಿಕರಿಗೆ ವಂದನೆಗಳು ಹೇಳುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು. | - |

**ಕಾರ್ಯದರ್ಶಿ**

21/5/22

ವಾರ್ಡ್ ಕಮಿಟಿ, ವಾರ್ಡ್.ಸಂಖ್ಯೆ.44
ಮಾರಪ್ಪನಪಾಳ್ಯ

Scanned with CamScanner